REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 13 | ISSUE - 5 | FEBRUARY – 2024
Peer Reviewed Journal

# ಶಿವಶರಣೆಯರಲ್ಲಿ ಭಕ್ತಿಮಾರ್ಗ

ಡಾ. ಸುನಿತಾ ಪಿ. ಮುಲಗೆ
ಅತಿಥಿ ಉಪನ್ಯಾಸಕರು , ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಕನ್ನಡ ಸಾಹಿತ್ಯ ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗ ವಚನಸಾಹಿತ್ಯ ಒಂದು ಉನ್ನತವಾದ ಉಜ್ವಲ ಸಾಹಿತ್ಯವಾಗಿ ಕಾಣುತ್ತದೆ 12ನೇ ಶತಮಾನದಲ್ಲಿ ಇದು ಅತ್ಯಂತ ಮಹತ್ವದ ಸ್ಥಾನಮಾನವನ್ನು ಪಡೆದುಕೊಂಡಿದೆ.

ಬಸವಣ್ಣನವರ ನೇತೃತ್ವದಲ್ಲಿ ಅನೇಕ ಶರಣ ಮತ್ತು ಶಿವಶರಣೆಯರು ವಚನ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ಅಲಮ್ಮಪ್ರಭು, ಚನ್ನಬಸವಣ್ಣ, ದೇವರದಾಸಿಮಯ್ಯ, ಶಿವಶರಣೆಯರಾದ ಅಕ್ಕಮಹಾದೇವಿ, ಅಕ್ಕಮ್ಮ, ಅಕ್ಕನಾಗಮ್ಮ, ನಿಲಾಂಬಿಕೆ, ಗಂಗಾಂಬಿಕೆ, ಆಯ್ದಕ್ಕಿ ಲಕ್ಕಮ್ಮ ಮುಂತಾದವರು ಈ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ವಚನ ಸಾಹಿತ್ಯವನ್ನು ಸಮೃದ್ಧಿಪಡಿಸಿದ್ದಾರೆ.

ಈ ಸಾಹಿತ್ಯವು ಎಲ್ಲ ಹಂತದ ಆಯಾಮಗಳನ್ನು ಒಳಗೊಂಡ ಸಾಹಿತ್ಯವಾಗಿದೆ. ಜೀವನದ ರೀತಿ ಮತ್ತು ರಿವಾಜಿನಿಂದ ಹಿಡಿದು ಸಮಾಜದ  ಬದುಕಿನ ನಡುವೆ ಮನುಷ್ಯನ ಪ್ರತಿ ಹಂತ ಹಂತದಲ್ಲಿ ಅನುಭವಿಸುವ ಸ್ಥಿತಿ–ಗತಿ, ನೋವು–ನಲಿವು, ಕಷ್ಟ–ಸುಖ, ಜಾತಿ–ಭೇದ ಲಿಂಗ–ಭೇದ, ಮೇಲು–ಕೀಲು ಇವುಗಳ ಅನುಭವಗಳನ್ನು ಒಳಗೊಂಡ ಸಾಹಿತ್ಯವೆನಿಸಿಕೊಂಡಿದೆ. ಅವುಗಳ ಜೊತೆಗೆ ಮನುಷ್ಯನಲ್ಲಿರುವ ಸದೃಢವಾದ ಭಾವನೆಗಳು ಕೆಟ್ಟ ವಿಚಾರ, ಅಂತರಂಗ, ಬಹಿರಂಗ, ಆಚಾರ–ವಿಚಾರ, ನಡೆ–ನುಡಿ ಮುಂತಾದ ಬದುಕಿನ ಪ್ರತಿಯೊಂದು ಮೌಲ್ಯಗಳನ್ನು ವಚನಗಳಲ್ಲಿ ಚಿತ್ರಿತವಾಗಿವೆ. ಈ ಸಾಹಿತ್ಯದ ಮೂಲಕ ದೇವರಲ್ಲಿರುವ ಆರಾಧನೆ, ಕಲ್ಪನೆ, ನಂಬಿಕೆ,  ಸಹನೆ ಭಕ್ತಿಯ ಸ್ವರೂಪವನ್ನಾಗಿ ಸಮಂಜಸವಾಗಿ ವಚನಗಾರ್ತಿಯರು ತಮ್ಮ ವಚನಗಳ ಮೂಲಕ ಭಕ್ತಿ ಮಾರ್ಗದ ಹೊಸ ಪಥವನ್ನು ವಿವರಿಸಿದ್ದಾರೆ.

ನಯ, ವಿನಯ, ದಯೆ, ನಂಬಿಕೆಗಳನ್ನೆ, ನಾವು ಭಕ್ತಿ ಎಂದು ಹೇಳಿದರೆ ತಪ್ಪಾಗಲಾರದು. ದೇವರಲ್ಲಿ ಇಲ್ಲವೆ ಗುರು ಹಿರಿಯರಲ್ಲಿ ಮತ್ತು ತಂದೆ ತಾಯಿಗಳಲ್ಲಿ ಕಾಣಬಹುದಾಗಿದೆ. ಇದು ಮನಸ್ಸಿಗೆ ಸಂಬಂಧಿಸಿದ ಭಾವನಾತ್ಮಕವಾದ ಜೀವನದ ಮೌಲ್ಯವಾಗಿದೆ. ಭಕ್ತಿ ಎನ್ನುವದು ಗುರುಹಿರಿಯರಲ್ಲಿ ತೋರುವ ಗೌರವ ಆತ್ಮಕಲ್ಯಾಣವನ್ನು ಸಾಧಿಸಿಕೊಳ್ಳುವ ರೀತಿಯಾಗಿವೆ. ಇದು ತೋರಿಕೆಗೆ ಮಾತ್ರ ಸೀಮಿತವಾಗಿರದೆ ನೈಜರೂಪವನ್ನು ಒಳಗೊಂಡಿರುವಂತಹದು. ಮನುಷ್ಯನ ಜನನದಿಂದಲೆ ಹುಟ್ಟಿಬರುವ ಅಮೂಲ್ಯವಾದ, ಸ್ವಚ್ಚಂದವಾದ, ನಿರ್ಮಲವಾದ ಅನುಭಾವವೇ ಭಕ್ತಿಯಾಗಿದೆ. ಪುರಾತನ ಕಾಲದಿಂದಲೂ ಭಕ್ತಿ ಸ್ವರೂಪವು ನಮ್ಮ ಹಿಂದೂ ಧರ್ಮದಲ್ಲಿ ಮಾತ್ರವಲ್ಲದೆ ಪ್ರಪಂಚದ ಆಯಾ ಧರ್ಮಗಳಲ್ಲಿ ಇದರ ಸ್ಥಾನ ಬಹುವ್ಯಾಪ್ತಿಯಾಗಿವೆ. ಈ ಹಿನ್ನೆಲೆಯಲ್ಲಿ ಭಕ್ತಿಯನ್ನು ಕುರಿತು ಶಿವಶರಣೆಯರು ತಮ್ಮ ವಚನಗಳ ಮೂಲಕ ಅಭಿವ್ಯಕ್ತಪಡಿಸಿದ್ದಾರೆ.

ಭಕ್ತಿಯು ಆತ್ಮದ ಸತ್–ಚಿತ್ ಆನಂದದ ರೂಪವಾಗಿದ್ದು, ದೈವಿಸ್ವರೂಪವಾಗಿ ಜಗವೆಲ್ಲ ವ್ಯಾಪಿಸಿಕೊಂಡಿದೆ, ಕರ, ಮನ, ಇಷ್ಟ, ಪ್ರಾಣ, ಭಾವದಲ್ಲಿಯೂ ಕೂಡಾ ಭಕ್ತಿ ತುಂಬಿಕೊಂಡಿದೆ. ದೇವರು ಎಂದರೆ ದೇಹ ಇಲ್ಲದವ, ವರ್ಣ ಇಲ್ಲದವ, ರೂಪ ಇಲ್ಲದವ ಎನ್ನುವ ಹಾಗೆ ಭಕ್ತಿಯು ಸಹ ಭವ ಇಲ್ಲದ, ಸೌಂದರ್ಯವಿಲ್ಲದ ಆಕಾರವಿಲ್ಲದ ರೂಪವಾಗಿದೆ.

ಅಕ್ಕಮಹಾದೇವಿಯು ಭಕ್ತಿಯನ್ನು ಕುರಿತು ಸೌಂದರ್ಯವಿಲ್ಲದ್ದು, ರೂಪವಿಲ್ಲದ್ದು, ಖಚಿತವಾದ ಸ್ಥಳವಿಲ್ಲದ್ದು ಇದಕ್ಕೆ ಯಾವ ಚಿಹ್ನೆಯು ಇಲ್ಲ ಎಂದು ವಿವರಿಸುತ್ತಾಳೆ. ಶಿವಶರಣರಲ್ಲಿ ಭಕ್ತಿ ಎನ್ನುವದು ಕೇವಲ ಕಾಯಕ ಮತ್ತು ಧರ್ಮದ ಜ್ಞಾನ ಮಾರ್ಗದ ಮೂಲಕ ಭೂಮಿಯಲ್ಲಿ ಎಲ್ಲರಿಗೂ ಸಿಗುವಂತಹದು ಎಂದು ವಿವರಿಸುತ್ತಾಳೆ ಆಯ್ದಕ್ಕಿ ಲಕ್ಕಮ್ಮ ತನ್ನ ಒಂದು ವಚನದಲ್ಲಿ ಭಕ್ತಿಯನ್ನು ಕುರಿತು ಹೀಗೆ ವಿವರಿಸುತ್ತಾಳೆ.

> ' ಭಕ್ತಂಗೆ ಬಡತನವುಂಟೆ? ನಿತ್ಯಂಗೆ ಮರಣವುಂಟೆ ?
> ಭಕ್ತರು ಬಡವರೆಂದು ಮತ್ತೊಂದ ಕೊಟಹೆನೆಂದಡೆ
> ಮಾರಯ್ಯಪ್ರಿಯ ಅಮಲೇಶ್ವರಲಿಂಗವು ಸತ್ತುಂದಿಗಲ್ಲದೆ ಬಡತನವಿಲ್ಲ. '

(ಶಿ.ವ.ಸಂ. ಪು. 223 ವ. 5)

ಭಕ್ತಿ ಜಿವನದಲ್ಲಿ ಸಿರಿತನ, ಬಡತನದಲ್ಲಿ ಇರುವುದಿಲ್ಲ; ಅದು ದೈವಯುತವಾದದ್ದು, ಸತ್ಯವಾದದ್ದು ಎಂದಿದ್ದಾಳೆ. ಭಕ್ತನಿಗೆ ಎಂದಿಗೂ ಬಡತನ, ಸಿರಿತನವು ಬಾರದೆ ಅವರು ಬದುಕಿನಲ್ಲಿ ಚಿರಂಜೀವಿಯಾಗಿರುತ್ತಾರೆ ಎಂದು ವ್ಯಕ್ತಪಡಿಸುತ್ತಾಳೆ. 'ಸತ್ಯಕ್ಕೆ ಜಯವಿದೆ' ಎಂಬ ಗಾದೆ ಮಾತಿನಂತೆ ಅದು ಪ್ರಾಮಾಣಿಕವಾಗಿದೆ ನಿಜವಾದ ಭಕ್ತಿ ಒಳ್ಳೆಯ ಗುಣಗಳಲ್ಲಿ, ಒಳ್ಳೆಯ ನಡತೆಯಲ್ಲಿ ಸನ್ಮಾರ್ಗದ ಹಾದಿಯಲ್ಲಿ ಇರುವುದಾಗಿದೆ. ಭಕ್ತನಾದವನು ಬಡವನಾಗಿದ್ದರು ಆಧ್ಯಾತ್ಮಿಕವಾಗಿ ಶ್ರೀಮಂತನಾಗಿರುತ್ತಾನೆ. 'ಕಾಯಕವೇ ಕೈಲಾಸ' ಎನ್ನುವ ರೀತಿಯಲ್ಲಿ ಪ್ರತಿ ಕಾರ್ಯದಲ್ಲಿಯೂ ದೇವರನ್ನು ಕಾಣುತ್ತಾ 'ದೇಹವೇ ದೇಗುಲ' ವನ್ನಾಗಿ ಮಾಡಿಕೊಂಡು ಕೈಲಾಸವನ್ನು ಕಾಣುವವನೆ ಭಕ್ತನು. ನಿಜವಾದ ಭಕ್ತನಿಗೆ ಸಾವು ಇರಲಾರದು ಎಂದು ಈ ವಚನದಲ್ಲಿ ಮೂಡಿಬಂದಿದೆ.

' ಎಡೆಯಿಲ್ಲದ ಭಕ್ತಿಯ ಮಾಡಹೋದರೆ
ಆ ಭಕ್ತಿ ನಿಷ್ಫಲವಾಯಿತ್ತಯ್ಯ
ಭಕ್ತಿ ನಿಷ್ಫಲವನ್ನೈದಲು
ಪ್ರಸಾದ ಸೂತಕವ ಕಾಣದೆ ಹೋದೆನಯ್ಯಾ
ಎಡೆಯಿಲ್ಲದ ಕಡೆಯಿಲ್ಲದ ಮೂರ್ತಿಯನರಸಲು
ಏಕಪ್ರಸನ್ನ ವದನವಾಯಿತ್ತಯ್ಯ ಹಿಪ್ಪೆಯನುಳಿದು ಸಿಪ್ಪೆಯನುಂಡು ನಾನು
ಪ್ರಸಾದಿಯಾದೆನಯ್ಯ ಸಂಗಯ್ಯ. '

(ಶಿ.ವ.ಸಂ. ಪು. 773. ವ. 66)

ವಚನಕಾರ್ತಿ ನಿಲಮ್ಮ ಭಕ್ತಿಯ ಸಫಲತೆಯನ್ನು ಕುರಿತು ಹೇಳುತ್ತಾಳೆ. ಯಾವುದೇ ಕೆಲಸವನ್ನು ನಾವು ನಿಶ್ಚಲ ಮನಸ್ಸಿನಿಂದ ಮಾಡಿದಾಗ ಆ ಕಾರ್ಯವು ಸಫಲಗೊಳ್ಳುವದು ಎಂದಿದ್ದಾಳೆ. ಪ್ರತಿಯೊಂದು ಕೆಲಸದಲ್ಲಿ ಶ್ರದ್ಧೆ, ನಂಬಿಕೆ, ಆತ್ಮವಿಶ್ವಾಸ ಇಟ್ಟಾಗ ಅದರ ಯಶಸ್ಸನ್ನು ನಾವು ಅನುಭವಿಸುತ್ತೇವೆ. ನಿಜವಾದ ಭಕ್ತಿ ಹೊಂದಬೇಕಾದರೆ ಯಾವುದೇ ಮೂಲದ ಪ್ರತಿಫಲವಿಲ್ಲದ ನಿಶ್ಕಲ್ಮಶವಾದ ಭಕ್ತಿ ನಮ್ಮದಾಗಬೇಕು ಎಂದು ವ್ಯಕ್ತಪಡಿಸುತ್ತಾಳೆ. ನಾಮಮಾತ್ರಕ್ಕೆ ದೇವರನ್ನು ಪೂಜಿಸದೇ ಅಂತರಾಳದಿಂದ ಪೂಜಿಸಿದಾಗ ದೇವರು ಒಲಿಯುತ್ತಾನೆ. ಇಲ್ಲವಾದರೆ ' ಹಿಪ್ಪೆಯನಳಿದ ಸಿಪ್ಪೆ ' ಹಾಗೆ ಪ್ರಸಾದಿಯಾಗುವದೆಂದು ಈ ಮೇಲಿನ ವಚನದ ಮೂಲಕ ವ್ಯಕ್ತಪಡಿಸುತ್ತಾಳೆ.

' ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ,
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ,
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲಿ
ಸಜಲವ ತುಂಬಿದಂತೆ
ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗವ ಮುಟ್ಟದ ಭಕ್ತಿ. '

(ಶಿ.ವ.ಸಂ.ಪು.14. ವ. 12)

ಭಕ್ತಿಯ ಆರಾಧನೆಯು ಆಧ್ಯಾತ್ಮಿಕ ಸಂಕೇತವಾಗಿದೆ. ಅದು ಬಹಿರಂಗದ ನೆಲೆಯಲ್ಲಿ ತೋರಿಸಿಕೊಳ್ಳುವದಲ್ಲ, 'ನಡೆ ಇಲ್ಲದ ನುಡಿ ಅರಿವಿಂಗೆ' ಹಾನಿ ಎಂಬಂತೆ ನಕರಾತ್ಮಕ ಕೆಲಸಗಳಿಂದ ಜೀವನದಲ್ಲಿ ಏರುಪೇರುಗಳುಂಟಾಗಿ ಕೆಟ್ಟ ಸ್ಥಿತಿ ತಂದುಕೊಳ್ಳುವದನ್ನು ಆಯ್ದಕ್ಕಿ ಲಕ್ಕಮ್ಮ ಈ ವಚನದಲ್ಲಿ ಸ್ಮರಿಸಿದ್ದಾಳೆ. ಆತ್ಮಶುದ್ಧಿ, ಅಂತರಶಕ್ತಿ, ಜ್ಞಾನಾರ್ಜನೆಯನ್ನು ಮನಸ್ಸು ಒಳಗೊಂಡಿದೆ. ಇವುಗಳಿಲ್ಲದೆ ಭಕ್ತಿಗೆ ಬೇರೆ ಯಾವ ಅರ್ಥವಿಲ್ಲ ಎಂಬಂತೆ, ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ' ಎಂದರ್ಥವಾಗುತ್ತದೆ. ಅದು ದೇವರಿಗೆ ಅರ್ಪಿತವಾಗಬೇಕು. ಭವ್ಯವಾದ ಆತ್ಮಶಕ್ತಿ ಆಗಬೇಕು. ದೃಢವಾದ ನಂಬಿಕೆಯಾಗಿ ಅದು ಲಿಂಗಕ್ಕೆ ಮಂಗಳವಾಗಬೇಕು. ಲೌಕಿಕದ ಅನುಭವದ ಜೊತೆಗೆ ಆತ್ಮದ ಅನುಭಾವಿಯಾಗಬೇಕು. ದೇಹ ಮತ್ತು ಮನಸ್ಸಿನ ಅರಿವು ಒಂದಾಗಬೇಕು. ಒಂದನ್ನು ಬಿಟ್ಟು ಇನ್ನೊಂದಿಲ್ಲ ಎಂಬ ಸತ್ಯ ತಿಳಿದಿರಬೇಕು. ಇದೆ ಭಕ್ತಿ ಪೂರ್ಣವಾದ ಬದುಕು. ಸರ್ವಗುಣಗಳ ಸಮ್ಮತ್ವದಲ್ಲಿ ಪ್ರಾಮಾಣಿಕ ನಡಿಗೆ ಇರಬೇಕು. ಹಾಗಿದ್ದರೆ ಮಾತ್ರ ನಾವು ಮಾಡುವ ಆಚರಣೆಯಲ್ಲಿ ಸಾಧನೆಗೈದು ಅದು ಲಿಂಗಕ್ಕೆ ಸಮರ್ಪಣೆ ಆಗುತ್ತದೆ ಎಂದು ಸಾರಿದ್ದಾಳೆ. ನಾನು ಎನ್ನುವ ಅಹಂಕಾರದಿಂದ ದೂರ ಇದ್ದು, ನಾವು ಮಾಡುವ ಎಲ್ಲ ಕೆಲಸಗಳಲ್ಲಿ ದೇವರಿದ್ದಾನೆ ಎಂದು ತಿಳಿದು ನಡೆದರೆ ಸಾಕು ಸನ್ಮಾರ್ಗದ ದಾರಿಗೆ ಬದುಕು ಸಾಗಿಸುತ್ತದೆ ಎಂಬುದೇ ಈ ವಚನದ ವೈಶಿಷ್ಟ್ಯ.

'ಮನಸ್ಸಿನಂತೆ ಮಹಾದೇವ' ಎಂಬ ಗಾದೆ ಹೇಳುವಂತೆ ಇಚ್ಚೆಯಿಂದ ಯಾವ ಕೆಲಸ ಮಾಡಿದರು ಅದು ನಮಗೆ ಒಲೆಯುತ್ತದೆ. ಒಳ್ಳೆಯ ಮನಸ್ಸಿದರೆ ದೇವರು ಒಲಿಯುತ್ತಾನೆ ಮತ್ತು ನೆಲೆಗೊಳ್ಳುತ್ತಾನೆ. ಅದಕ್ಕಾಗಿಯೇ ಪ್ರತಿಯೊಂದು ಕಾರ್ಯಕ್ಕೂ

ಮುಂಚಿತವಾಗಿ ದೇವರನ್ನು ಸ್ಮರಿಸಿಕೊಳ್ಳುತ್ತೇವೆ. ಏಕೆಂದರೆ ಪ್ರತಿಯೊಬ್ಬರ ಹೃದಯದಲ್ಲಿ ಭಗವಂತನಿರುತ್ತಾನೆ. ಆದ್ದರಿಂದಲೆ ಮಾನವನಿಗೆ ಮುಕ್ತಿ ದೊರೆಯುತ್ತದೆ.

' ತೊಬರದ ಕೊಳ್ಳಿಯಂತೆ ಉರಿವಾತ ಭಕ್ತನೆ ?
ಹುಸಿದು ತಂದು ಮಾಡುವಾತ ಭಕ್ತನೆ ?
ಭಕ್ತರ ಕುಲವನೇ ನಿಂದಿಸುವಾತ ಭಕ್ತನೆ ? '

(ಶಿ.ವ.ಸಂ.ಪು. 227 ವ. 08 )

ಶಾಂತತೆ, ಸರಳತೆ, ವಿನಯ ಭಕ್ತಿಯ ಒಳಾರ್ಥಗಳನ್ನು ಹೊಂದಿವೆ. 'ತಾಳಿದವನು ಬಾಳಿಯಾನು' ಎಂಬಂತೆ, ಮನುಷ್ಯನಲ್ಲಿ ತಾಳ್ಮೆಯು ಬಹುಮುಖ್ಯವಾದದ್ದು, ತಾಳ್ಮೆ ಇದ್ದರೆ ಜಗತ್ತನ್ನೆ ಗೆಲ್ಲುವ ಸಾಮಾರ್ಥ್ಯ ನಮ್ಮದಾಗುತ್ತದೆ. ಹೀಗಿದ್ದಲ್ಲಿ ಕಟ್ಟಿಗೆ ಉರಿಯುವಂತೆ ಉರಿಯುವ ಮನಸು ನಮ್ಮದಾದರೆ ದೇವರಲ್ಲಿ ಭಕ್ತಿಯನ್ನು ಕಾಣದು. ಅದರಂತೆ ಸುಳ್ಳು ಮಾತುಗಳಿಂದ, ಮೋಸ ವಂಚನೆಗಳಿಂದ ಬದುಕುವರನ್ನು ಭಗವಂತನು ಎಂದಿಗೂ ಒಲೆಯುವುದಿಲ್ಲ ಎಂಬ ಕಟು ಸತ್ಯ ಈ ವಚನವು ಸ್ಪಷ್ಟಪಡಿಸುತ್ತದೆ. ಜಾತಿ, ಮತ, ಭೇದ, ಮೇಲು, ಕೀಲು ಎಂಬ ಭಾವನೆ ದೇವರ ಅನುಗ್ರಹದಲ್ಲಿ ಸುಳಿಯಲಾರವು. ಅವುಗಳನ್ನು ಎಣಿಸುವವರಲ್ಲಿ ಭಕ್ತಿಯು 'ಒಪ್ಪುವಂತಹದಲ್ಲ ಎಂಬುದನ್ನು ತಿಳಿಸುವ ಈ ವಚನವು ವಿಶೇಷತೆಯನ್ನು ಪಡೆದುಕೊಂಡಿದೆ.

ಪ್ರಸ್ತುತ ಸಂದರ್ಭದಲ್ಲಿ ಇಂತಹ ಭಕ್ತಿಯನ್ನು ಡಾಂಬಿಕತೆ ಎಂದು ಹೇಳುವುದುಂಟು. ಕೆಲವರು ನಿಜವಾದ ಭಕ್ತಿ ಹೊಂದಿದ್ದರೆ ಅದು ದೇವರಿಗೆ ಸಲ್ಲುವಲ್ಲಿ ಸಂದೇಹವಿಲ್ಲ. ಇಲ್ಲವಾದರೆ ಕೇವಲ ಕಣ್ಣಿಗೆ ಗೋಚರವಾಗುವ ರೀತಿಯಲ್ಲಿ ನಟನೆಯ ಆಡಂಬರದ ತೋರಿಕೆಯಾಗುತ್ತದೆ. ದೇವರನ್ನು ಅಂತಃಕರಣದಿಂದ ಪೂಜಿಸಿದಾಗ ಇವುಗಳ ಅನಿವಾರ್ಯತೆ ಇರುವುದಿಲ್ಲ. ದೇವರನ್ನು ಪ್ರೀತಿಯ ಮನೋಭಾವದಿಂದ ಪೂಜಿಸಿದರೆ ಪ್ರತಿಯೊಬ್ಬರಿಗೂ, ಪ್ರತಿ ಜನಾಂಗಕ್ಕೂ, ದೇವರು ಒಲೆಯುತ್ತಾನೆ. ಆಗ ಭಕ್ತ ಮತ್ತು ಭಕ್ತಿ ಎಂಬ ಪ್ರಶ್ನೆಗಳಿಗೆ ಉತ್ತರಗಳು ತಾನಾಗಿಯೆ ದೊರೆಯುತ್ತವೆ. ಪ್ರತಿಯೊಂದು ಕಾರ್ಯ ಮಾಡುವಾಗ ಗುರಿ, ಉದ್ದೇಶ ಹೊಂದಿರಬೇಕು. ಅಂಧಕಾರದಿಂದ ಬೆಳಕಿನಡೆಗೆ ಹೋಗುವ ಪ್ರಯತ್ನ ಮಾಡಬೇಕು. ತಿಳುವಳಿಕೆಯ ಜ್ಞಾನದಿಂದ ತಪ್ಪು–ಒಪ್ಪುಗಳನ್ನರಿತು ಮುನ್ನಡೇದರೆ ಬದುಕು ಸಾರ್ಥಕವಾಗುತ್ತದೆ.

ಒಟ್ಟಿನಲ್ಲಿ ಭಕ್ತಿಮಾರ್ಗವು ವಚನಗಾರ್ತಿಯರ ಹಲವಾರು ವಚನಗಳ ಮುಖಾಂತರ ಅರಿಯಬಹುದಾಗಿದೆ. ಇದು ಮನುಷ್ಯನ ಒಳಿತಿಗಾಗಿ ಹುಟ್ಟಿಕೊಂಡಿದ್ದರು, ಇದರ ಮಾರ್ಗ ಮನುಷ್ಯನಿಂದಲೆ ಧೈಯ ಧೋರಣೆಗಳನ್ನು ಹೊಂದಿದೆ. ಭಕ್ತಿಯ ಒಂದು ತಾತ್ವಿಕ ಭಾಗವಾದರೆ ಧರ್ಮ ಆಚಾರಕ್ಕೆ ಸಂಬಂಧಿತವಾಗಿದೆ. ಇವೆರಡು ಪರಸ್ಪರಾವಲಂಬಿಗಳು. ಕೆಟ್ಟದರಿಂದ ಒಳ್ಳೆಯದರ ಕಡೆಗೆ ಪರಿವರ್ತನೆ ಹೊಂದುವುದೆ ಧರ್ಮ, ಒಳ್ಳೆಯ ಧರ್ಮವೇ ಆಚಾರ, ಆಚಾರದ ನಡೆಯೇ ಭಕ್ತಿ, ಭಕ್ತಿ ಶ್ರೇಷ್ಠತೆಯ ತತ್ವಗಳನ್ನು ಆಚರಣೆಗೆ ತಂದಾಗ ಮಾತ್ರ 'ಆಚಾರಃ ಪ್ರಥಮೋ ಧರ್ಮ ಆಚಾರವೆ ಸ್ವರ್ಗ' ಎಂಬ ಮಹಾನುಭವಿಗಳ ಸಾಲುಗಳು ಮಹತ್ವದಾಗಿವೆ.

ಶಿವಶರಣರಲ್ಲಿ ಭಕ್ತಿಯು ಕೇವಲ ದೈಹಿಕವಾಗಿ, ಆಂತರಿಕವಾಗಿ ಮಾಡುವ ಕ್ರಮವಲ್ಲ. ಪೂಜಭಾವನೆಯಿಂದ ಮಾಡುವ ದೇವರ ಸೇವೆ, ಮನೋಧರ್ಮದಿಂದ ಮಾಡುವ ಕೆಲಸವಾಗಿದೆ. ಪ್ರತಿಯೋಂದು ಜೀವಿಯಲ್ಲಿಯು ಭಕ್ತಿಯ ನೆಲೆ ಆವರಿಸಿಕೊಂಡಿರುತ್ತದೆ. ಅದನ್ನು ಸತ್ಕಾರ್ಯಗಳಲ್ಲಿ ಕಾಣಬೇಕು. ಪೂಜೆ ಪುನಸ್ಕಾರಗಳು ವ್ಯಕ್ತಿಗೆ ಸೀಮಿತವಾಗಿರದೆ ಅದು ಅವರ ಕ್ರಿಯೆಯ ಮೂಲಕ ಹೊರ ಹೊಮ್ಮುವ ಮನಸ್ಥಿತಿಯ ಸ್ವರೂಪವನ್ನು ಒಳಗೊಂಡಿರುತ್ತದೆ ಎಂದು ಶಿವಶರಣೆಯರು ನಂಬಿದ್ದಾರೆ. ಲೌಕಿಕ ಜೀವನದ ನಿರಾಕರಣೆ ಹಾಗು ವೈಯಕ್ತಿಕತೆಗೆ ಮಾತ್ರವಾಗದೆ ಕುಟುಂಬದಿಂದ ಸಮಾಜದವರಿಗೂ ದೇವ–ಭಕ್ತ ಇವರುಗಳ ನಡುವಿನ ಸಂಬಂಧವನ್ನು ಹೊಸ ನಿಟ್ಟಿನಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಪ್ರತಿಪಾದಿಸಿದ್ದಾರೆ. ಇವರು ದೇವರ ಕುರಿತಲ್ಲದೆ ಕೆಲಸದಲ್ಲಿ ನಿಷ್ಠುರವಾದ ನಿಯಮಗಳನ್ನು ಪಾಲಿಸಿ ಸಮಾಜಕ್ಕೆ ಮಾದರಿಯಾಗಿದ್ದಾರೆ.

ಭಕ್ತನಾದವನು ದೇವರಲ್ಲಿ ಶಿಸ್ತು ಮತ್ತು ಸಂಯಮ, ತಾಳ್ಮೆ, ವಿನಯ, ಜ್ಞಾನ, ನಂಬಿಕೆ, ಗ್ರಹಿಕೆ ಮುಂತಾದ ಅಂಶಗಳನ್ನು ಹೊಂದಿದ್ದು ಮಾನವಿಯ ಗುಣಗಳನ್ನು ಅಳವಡಿಸಿಕೊಂಡು ಬದುಕಿನ ಶ್ರೇಷ್ಠತೆಯನ್ನು, ಸತ್ಯದ ಸ್ವರೂಪವನ್ನು, ಕರೆತರುವ ಕಾರ್ಯಗಳನ್ನು ಮಾಡಬೇಕು. ದೇವರು ಇಹಲೋಕದಲ್ಲಿ ಎಲ್ಲಾ ಕಡೆಗೆ ನೆಲೆಸಿದ್ದಾನೆ. ಸರಿಯಾದ ಆಚಾರ, ವಿಚಾರ, ಒಳ್ಳೆಯ ನಡತೆಯಲ್ಲಿ ದೇಹದ ಹೊರಗು ಮತ್ತು ಒಳಗು ಆವರಿಸಿಕೊಂಡಿದ್ದಾನೆ. ಅದನ್ನು ಅರಿತವನೆ ನಿಜವಾದ ಭಕ್ತ ಎಂದು 12ನೇ ಶತಮಾನದ ಶಿವಶರಣೆಯರು ಧರ್ಮದ ತಳಹದಿಯ ಆಧಾರದ ಮೇಲೆ ಭಕ್ತಿಯ ಪಥವನ್ನು ವಚನಗಳ ಮೂಲಕ ನಿರೂಪಿಸಿದ್ದಾರೆ.

## ಆಧಾರ ಗ್ರಂಥಗಳು;–

1) ವಚನ ಪರಿಭಾಷಾಕೋಶ (ಸಂ) ಡಾ.ಎನ್.ಜಿ.ಮಹಾದೇವಪ್ಪ (2001)
(ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು)
2) ವಚನ ಕಮ್ಮಟ (ಸಂ) ಕೆ.ಮರುಳಸಿದ್ದಪ್ಪ ಕಿ.ರಂ.ನಾಗರಾಜ (2012)

3) ಮಧ್ಯಕಾಲೀನ ಭಕ್ತಿ & ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ (ಸಂ)
ಡಾ. ಬಸವರಾಜ ಕಲ್ಲುಡಿ (ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳುರು (1988)
4) ಶಿವಶರಣೆಯರ ವಚನ ಸಂಪುಟ–5 (ಸಂ) ಡಾ: ವೀರಣ್ಣ ರಾಜೂರು (2001)
(ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು)